# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

## ಮಾದರಿ ಪ್ರಶ್ನೆ ಪತ್ರಿಕೆ–01

**ತರಗತಿ : 10ನೇ** — **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** — **ಸಮಯ : 3 ಗಂಟೆ**

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ** **(1X4=4)**

1 ತಂಗಾಳಿ ಪದವು ಈ ಸಮಾಸಕ್ಕೆ ಉದಾಹರಣೆ:
ಎ) ದ್ವಿಗು ಸಮಾಸ ಬಿ) ಕರ್ಮಧಾರೆಯ ಸಮಾಸ ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ

2 ತುತ್ತತುದಿ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
ಎ)ಅನುಕರಣಾವ್ಯಯ ಬಿ)ಜೋಡುನುಡಿ ಸಿ)ನುಡಿಗಟ್ಟು ಡಿ)ದ್ವಿರುಕ್ತಿ

3 ಪರೋಪಕಾರ ಪದವು ಈ ಸಂಧಿಗೆ ಉದಾಹರಣೆ:
ಎ)ಲೋಪಸಂಧಿ ಬಿ)ಆಗಮಸಂಧಿ ಸಿ)ಸವರ್ಣದೀರ್ಘಸಂಧಿ ಡಿ)ಗುಣಸಂಧಿ

4 ಮಾಡುತ್ತಾನೆ ಪದದ ಧಾತು ರೂಪ:
ಎ)ಮಾಡು ಬಿ)ಮಾಡಿದನು ಸಿ)ಮಾಡುವನು ಡಿ)ಮಾಡನು

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **(1X12=12)**

5 ಅಸಿ ಮಸಿ ಕೃಷಿ ಗದ್ಯವನ್ನು ಯಾವ ಪ್ರಬಂಧ ಸಂಕಲನದಿಂದ ಆರಿಸಲಾಗಿದೆ?

6 ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?

7 ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?

8 ಥೇಮ್ಸ್ ನದಿಯ ಮೇಲೆ ಒಟ್ಟು ಎಷ್ಟು ಬ್ರಿಜ್‌ಗಳಿವೆ?

9 ಅಸ್ಪ್ರಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

10 ಯಾವುದಕ್ಕೆ ನಾನು ಕರಗುತ್ತೇನೆ ಎಂದು ಏಣಿ ಹೇಳುತ್ತದೆ?

11 ಹೆಡ್ ಮಾಸ್ತರರು ಸಂತೋಷಗೊಂಡಿದ್ದು ಏಕೆ?

12 ಸಮಾಜ ಪ್ರಗತಿಯ ಮೆಟ್ಟಿಲು ತುಳಿಯಲು ಯಾವಾಗ ಸಾಧ್ಯವಾಗುತ್ತದೆ?

13 ಕುಣಿಗಲ್ ಕೆರೆ ಹೇಗೆ ಬಾಗುತ್ತದೆ?

14 ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?

15 ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾನೆ?

16 ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ?

SHARANUSH

**II ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ. (8 X2=16)**

17 ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದದ್ದು ಹೇಗೆ?

18 ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?

19 ಏಣಿ ತಾನು ಎಂಥವರಿಗೆ ಯಾವರೀತಿ ಸ್ಪಂದಿಸುತ್ತೇನೆ ಎಂದು ಹೇಳುತ್ತದೆ?

20 ಹಕ್ಕಿಗಳು ಗೂಡಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ?

21 ನಮ್ಮ ಬದುಕು ಕೆಸರಿನ ಕಮಲದಂತಿರಬೇಕು ಏಕೆ?

22 ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

23 ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?

24 ವೈದ್ಯರು ಭೀಮಾನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

**IV . ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. (1X3=3)**

25 ಗುರುರಾಜ ಕರ್ಜಗಿ

**V. ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ (1X3=3)**

26 ವೇಷ ಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೋದಿ ಫಲವೇನಯ್ಯ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ**

**(1X3=3)**

27 ಸೇನಾಸಾಗರ

**VII ಗಾದೆ ವಿಸ್ತರಿಸಿ ಬರೆಯಿರಿ (1X3=3)**

28 ಹಾಸಿಗೆ ಇದ್ದಷ್ಟು ಕಾಲು ಚಾಚು

**ಅಥವಾ**

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ. (5X3=15)**

29 ಲಂಡನ್ ಮಲಗಿ ನಿದ್ರಿಸುತ್ತದಯೇ ಅನಿಸುತ್ತದೆ

SHARANU SH

30 ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ

31 ಅಂದಾ ನೋಡಲು ಶಿವ ಬಂದ್ರು

32 ಕಾಡುತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು

33 ಸಿಡುಕು ಮಿಡುಕನು ತೊರೆದು ಮೌನಿಯಾಗು

**IX.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1X4=4)**

34. ಕೊರಡ ಕೊನಸಿರಿ......................................

..............................................................

...............................................................

..................................ಕಲರವಕೆ ಮತ್ತೇರಿದೆ.

**ಅಥವಾ**

ಯುಗದ ಹಿಂದಿನ ....................................

.....................................................................

......................................................................

..........................................ತುಂಬ ಸವಿಚೈತ್ರವು.

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1X4=4)**

35 ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ

**ಅಥವಾ**

ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡುಬರುತ್ತವೆ?

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**(2 X2=4)**

36 ನಾವು ಯಾವುದೇ ಕಾರ್ಯದಲ್ಲಿ ಯಶಸ್ಸು ಸಾಧಿಸುವುದಕ್ಕೆ ಮೂರು ಅಂಶಗಳು ಅತ್ಯಗತ್ಯ.ಅವುಗಳೆಂದರೆ ಸತತ ಅಭ್ಯಾಸ,ಇಂದ್ರೀಯ ನಿಗ್ರಹ,ಶ್ರದ್ಧೆ.ನಿರಂತರವಾದ ಅಭ್ಯಾಸದಿಂದ ಅರ್ಥವಾಗದೇ ಇರುವ ಕಷ್ಟಕರ ವಿಷಯವನ್ನಾದರೂ ಅರ್ಥಮಾಡಿಕೊಳ್ಳಬಹುದು.ನಿರಂತರ ಅಭ್ಯಾಸದಿಂದ ಅಸಾಧ್ಯವಾದುದನ್ನು ಸಾಧಿಸಬಹುದು.ಸತತ ಅಭ್ಯಾಸ ಮನಸ್ಸನ್ನು ಏಕಾಗ್ರಗೊಳಿಸಿ ಆ ವಿಷಯದ ಮೇಲೆ ಪ್ರಭುತ್ವವನ್ನು ಸಾಧಿಸುವಂತೆ ಮಾಡುತ್ತದೆ.ಇದು ನನ್ನಿಂದ ಸಾಧ್ಯ ಎಂಬ ಸಕಾರಾತ್ಮಕ ಮನೋಭಾವವನ್ನು ಮೂಡಿಸುತ್ತದೆ.ಒಂದೊಂದು ಇಂದ್ರೀಯಗಳು ಒಂದೊಂದು ಕಡೆ ಎಳೆಯುತ್ತಿದ್ದರೆ ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ.ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸಬೇಕು.ಇಂದ್ರಿಯ ನಿಗ್ರಹ ಯಶಸ್ಸನ್ನು ಸಾಧಿಸುವಲ್ಲಿ ಪ್ರಮುಖವಾದ ಮೆಟ್ಟಿಲಗಿದೆ.ನಮ್ಮ ಬಾಳಿನ ಸಾರ್ಥಕತೆಗೆ ಶುದ್ಧ ಮತ್ತು ಪ್ರಾಮಾಣಿಕ ಮನಸ್ಸು ಅತ್ಯಗತ್ಯ.ಅಂಥಹ ಮನಸ್ಸಿನ ಪ್ರಪ್ರಥಮ ಗುಣವೇ ಪರಿಪೂರ್ಣ ಶ್ರದ್ಧೆ.ಇದು ನಮ್ಮ ಮನಸ್ಸು ನೈಜ ಮತ್ತು ಒಳಿತಿನ ಮೌಲ್ಯವನ್ನು ತಾನೇತಾನಾಗಿ ಸ್ವೀಕರಿಸುವಂತೆ ಮಾಡುತ್ತದೆ.ಶ್ರದ್ಧೆ ನಮ್ಮನ್ನು ಗುರಿಯತ್ತ ಮುನ್ನುಗ್ಗಲು ಉತ್ಸಾಹವನ್ನು ತುಂಬಿಸುವ ಶಕ್ತಿಯಾಗಿದೆ.ಪರಿಶ್ರಮ ಮತ್ತು ಪ್ರಾಮಾಣಿಕತೆಗಳೇ ಶ್ರದ್ಧೆಯ

ಮೂಲಾಂಶಗಳು.ಶ್ರದ್ಧೆ ಒಂದು ಅಚಲವಾದ ಮತ್ತು ಕ್ರಿಯಾತ್ಮಕವಾದ ನಂಬಿಕೆ.ಇದು ನಮ್ಮನ್ನು ನಾವು ಕೈಗೊಂಡ ಕಾರ್ಯದಲ್ಲಿ ಮುನ್ನುಗ್ಗುವಂತೆ ಮಾಡುತ್ತದೆ.ಶ್ರದ್ಧೆ ಎಂದರೆ ಮನುಷ್ಯನ ಪ್ರಯೋಗಶೀಲವಾದ ಮನಸ್ಸು ಕೈಗೊಳ್ಳುವ ಸಾಹಸ ಎಂದು ತಿಳಿಯಬೇಕು.ಶ್ರದ್ಧೆಯುಳ್ಳವನಿಗೆ ಜ್ಞಾನವು ಲಭಿಸುತ್ತದೆ.ಶ್ರದ್ಧೆ ಜ್ಞಾನವನ್ನು ಸಮರ್ಥವಾಗಿ ಸ್ವೀಕರಿಸುವ ಪರಿಶುದ್ಧವ ಮನಃಪಕ್ವತೆಯನ್ನು ನಮ್ಮಲ್ಲಿ ಉಂಟುಮಾಡುತ್ತದೆ.ಶ್ರದ್ಧೆಯಿಲ್ಲದೆ ಕಲಿತ ಕಲಿಕೆ ಜ್ಞಾನವಾಗದು.ಶೈಕ್ಷಣಿಕ ಪರೀಕ್ಷೆಯಲ್ಲಾಗಲಿ ಜೀವನದ ಪರೀಕ್ಷೆಯಲ್ಲಾಗಲಿ ಸಂಪೂರ್ಣ ಯಶಸ್ಸನ್ನು ಗಳಿಸುವದಕ್ಕೆ ಪರಿಪೂರ್ಣ ಶ್ರದ್ಧೆ ಇರಬೇಕು.ನಾವು ಶ್ರದ್ಧೆಯಿಂದ ಕೆಲಸ ಮಾಡಬೇಕೇ ಹೊರತು ಸ್ಪರ್ಧೆಯಿಂದ ಅಲ್ಲ.ಶ್ರದ್ಧೆಯಿಂದ ಮಾಡಿದ ಕೆಲಸಕಾರ್ಯಗಳು ಯಶಸ್ವಿಯಾಗುತ್ತವೆ ಜೊತೆಗೆ ನಮಗೆ ಸಂತೃಪ್ತಿಯನ್ನು ನೀಡುತ್ತವೆ.

**ಪ್ರಶ್ನೆಗಳು**

ಅ) ಯಶಸ್ಸಿನ ನಿಜವಾದ ಮೆಟ್ಟಿಲುಗಳಾವುವು?

ಆ) ಶ್ರದ್ಧೆಯುಳ್ಳವನಿಗೆ ಜ್ಞಾನವು ಹೇಗೆ ಲಭಿಸುತ್ತದೆ?

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ಸ್ವಚ್ಛಭಾರತ ಅಭಿಯಾನ

**ಅಥವಾ**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸಚಿನ್/ಪ್ರಗತಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ಬಿಜಾಪುರದ ಗಾಂಧೀನಗರದ ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ನಸೀಮಾ/ಫಾರೂಕ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಗಿಡನೆಡುವ ಕಾರ್ಯಕ್ರಮಕ್ಕೆ ಆಗಮಿಸುಂತೆ ತಾಲೂಕ ಕಾರ್ಯ ನಿರ್ವಹಣಾ ಅಧಿಕಾರಿಗೊಂದು ಮನವಿ ಪತ್ರ ಬರೆಯಿರಿ

***********

SHARANUSH